<u>ಅಸಲು ದಾವಾ ಸಂಖ್ಯೆ:**-89/2020**</u> ಪಿ.ಡಬ್ಲ್ಯೂ:- **1**

ದಿನಾಂಕಃ 24-02-2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ನಿಪಿ-13 ಮತ್ತು 14 ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವೈರ್ ಅನ್ನು ಪ್ರತಿವಾದಿಯವರು ಕಟ್ಟಿರುತ್ತಾರೆ. ನಾನು ಮನೆಯಲ್ಲಿದ್ದಾಗ ಪ್ರತಿವಾದಿಯು ವೈರ್ ಅನ್ನು ಕಟ್ಟಿರುತ್ತಾರೆ. ನಾನು ಪ್ರತಿವಾದಿಗಳನ್ನು ಯಾಕೆ ವೈರು ಕಟ್ಟಿದ್ದೀರಿ ಎಂದು ಕೇಳಿದ ನಂತರ ಪ್ರತಿವಾದಿ ವೈರನ್ನು ತೆಗೆದಿರುತ್ತಾರೆ. ನಿಪಿ-13 ಮತ್ತು 14 ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವೈರ್ ಈಗಲೂ ಹಾಗೆಯೇ ಇದೆ ಎಂದರೆ ಸರಿಯಲ್ಲ. ನಿಪಿ-13 ಮತ್ತು 14 ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವೈರ್ ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ ಕಟ್ಟಿದ್ದು ಈಗಲೂ ಹಾಗೆಯೇ ಇದೆ ಎಂದರೆ ಸರಿಯಲ್ಲ. ನಿಪಿ-13 ಮತ್ತು 14 ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವೈರನ್ನು ಸರ್ವೇ ಅಧಿಕಾರಿಗಳು ಸರ್ವೇ ಮಾಡಿ ಕಟ್ಟಿದಂತಹ ವೈರು ಎಂದರೆ ಸರಿಯಲ್ಲ. ನಿಪಿ-13 ಮತ್ತು 14 ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ವೈರನ್ನು ಫೆಬ್ರವರಿ 2020 ನೇ ಸಾಲಿನಲ್ಲಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ಅಧಿಕಾರಿಗಳು ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಸರ್ವೇ ಮಾಡಿ ಹದ್ದುಬಸ್ತು ಕಲ್ಲನ್ನು ನೆಟ್ಟಿರುತ್ತಾರೆ ಎಂದರೆ ಸರಿ. ಸದರಿ ಹದ್ದುಬಸ್ತು ಕಲ್ಲು ನನ್ನ ತೋಟದಲ್ಲಿ ಬರುತ್ತದೆ ಎಂದರೆ ಸರಿ. ಸರ್ವೇ ಅಧಿಕಾರಿಗಳು ಸರ್ವೇ ಮಾಡಿ ಹದ್ದುಬಸ್ತು ಕಲ್ಲಿನ ಆಧಾರದ ಮೇಲೆ ಹಗ್ಗವನ್ನು ನಿಪಿ-13 ಮತ್ತು 14 ಛಾಯಾಚಿತ್ರದ ಆಧಾರದ ಮೇಲೆ ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ಹನುಮಂತಪ್ಪ ಇಬ್ಬರು ಅಣ್ಣ ತಮ್ಮಂದಿರು ಎಂದರೆ ಸರಿ. ಹನುಮಂತಪ್ಪನ ಭಾಗಕ್ಕೆ ಬಂದಂತಹ ಆಸ್ತಿಯನ್ನು ನಾನು ಖರೀದಿ ಮಾಡಿದ್ದೇನೆ ಎಂದರೆ ಸರಿ. ಪ್ರತಿವಾದಿ ಮತ್ತು ಹನುಮಂತಪ್ಪರವರು ಕುಟುಂಬ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಪ್ರತಿವಾದಿ ಮತ್ತು ಹನುಮಂತಪ್ಪರವರು ಕುಟುಂಬ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ವಿಚಾರ ತಿಳಿದ ನಂತರ ನಾನು ಖರೀದಿ ಮಾಡಿರುತ್ತೇನೆ. ಪ್ರತಿವಾದಿ ಮತ್ತು ಹನುಮಂತಪ್ಪರವರ ನಡುವೆ

ಕುಟುಂಬ ಆಸ್ತಿಗಳನ್ನು ವಿಭಾಗ ಮಾಡಿಕೊಂಡ ನಂತರ ಮುಟೇಷನ್ ಆಗಿರುವ ವಿಚಾರ ನಮ್ಮ ಯಜಮಾನರಿಗೆ ಗೊತ್ತು. ಪ್ರತಿವಾದಿ ಮತ್ತು ಹನುಮಂತಪ್ಪ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ತಮ್ಮ ವಿಭಾಗಕ್ಕೆ ಬಂದಂತಹ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿದ್ದರು. ಹನುಮಂತಪ್ಪ ರವರು ತಾವು ಸ್ವಾಧೀನಾನುಭವದಲ್ಲಿರುವ ಜಮೀನಿನ ಆಧಾರದ ಮೇಲೆ ತನ್ನ ಭಾಗಾಂಶಕ್ಕೆ ತೆಗೆದುಕೊಂಡಿರುತ್ತಾರೆ ವಿನಃ ನಿರ್ದಿಷ್ಟವಾಗಿ 2 ಎಕರೆ ಜಮೀನನ್ನು ತಮ್ಮ ಹೆಸರಿಗೆ ಭಾಗಾಂಶ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿಗೆ ಪ್ರತಿವಾದಿಗೆ ಬಿಟ್ಟು ಪೂರ್ವ ದಿಕ್ಕಿಗೆ ಹನುಮಂತಪ್ಪರವರು ಆಸ್ತಿಯನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಸದರಿ ಆಸ್ತಿಯನ್ನು ಅಳತೆ ಮತ್ತು ಹದ್ದುಬಸ್ತನ್ನು ಮಾಡಲು ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಹನುಮಂತಪ್ಪರವರು ನಮಗೆ ಅಳತೆ ಮಾಡಿ ಕೊಟ್ಟಿರುತ್ತಾರೆ, ನಾವು ಯಾವುದೇ ಅಳತೆಯನ್ನು ಮಾಡಿಸಿರುವುದಿಲ್ಲ. ಅಳತೆ ಮಾಡಿಸಿದ ಬಗ್ಗೆ ದಾಖಲೆಯ ಬಗ್ಗೆ ನನ್ನ ಯಜಮಾನರಿಗೆ ಗೊತ್ತು ನನಗೆ ಗೊತ್ತಿಲ್ಲ. ನಮ್ಮ ಯಜಮಾನರನ್ನು ಸದರಿ ದಾಖಲೆಯ ಬಗ್ಗೆ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಗಂಡನ ಹೆಸರು ಪರಸಪ್ಪ. ಜಮೀನನ್ನು ಅಳತೆ ಮಾಡಿಸಿದ ಬಗ್ಗೆ ದಾಖಲೆಯನ್ನು ನನ್ನ ಯಜಮಾನರಿಂದ ಪಡೆದುಕೊಂಡು ಬಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.